<u>ಸಾಕ್ಷಿಯನ್ನು ರಿಟ್ ಅರ್ಜಿ ಸಂಖ್ಯೆ: **22769/2022** ರ ಮೇಲಿನ ಆದೇಶದಂತೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 30.03.2023.**</u>

**ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದಃ**

4) ನಾನು ಬಿ.ಎ. ಪದವೀಧರನಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ವಾದಿಗಳೆಲ್ಲರೂ ಯಾವ ಕಾರಣಕ್ಕೆ ಈ ದಾವೆ ಹಾಕಿದ್ದಾರೆ ಎಂದರೆ ದಾವಾ ಸ್ವತ್ತಿನಲ್ಲಿ ನಮಗೆಲ್ಲಾ ಭಾಗ ಬರಬೇಕೆಂದು ದಾವೆ ಹಾಕಿದ್ದೇವೆ. ವಾದಿಗಳು ಮತ್ತು ಪ್ರತಿವಾದಿ ಜಗನ್ನಾಥ ಅವಿಭಕ್ತ ಕುಟುಂಬದ ಸದಸ್ಯರು ಎಂಬ ಬಗ್ಗೆ ನಾನು ಯಾವುದಾದರೂ ದಾಖಲೆ ಹಾಜರು ಮಾಡಿದ್ದೀನಾ? ಎಂದರೆ ಇಲ್ಲ, ಪ್ರತಿವಾದಿ ನಮಗೆ ದೂರದ ಸಂಬಂಧಿಕರು ಆಗುತ್ತಾರೆ. ಪ್ರತಿವಾದಿಯ ತಂದೆ ದ್ಯಾವಣ್ಣ ಯಾವಾಗ ಮೃತಪಟ್ಟರು ಎಂದರೆ ತುಂಬಾ ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ, ನನಗೆ ದಿನಾಂಕ ಗೊತ್ತಿಲ್ಲ. ಸದರಿ ದ್ಯಾವಣ್ಣನಿಗೆ ಎಷ್ಟು ಜನ ಮಕ್ಕಳು ಎಂದರೆ ಹಿರಿಯ ಮಗ ತೀರಿಕೊಂಡಿದ್ದಾನೆ, ಪ್ರತಿವಾದಿ ಜಗನ್ನಾಥ ಇದ್ದಾರೆ, ಇನ್ನೂ ಒಬ್ಬ ಹೆಣ್ಣು ಮಗಳು ಇರಬಹುದು. ದ್ಯಾವಣ್ಣನಿಗೆ ಗೋಪಾಲಯ್ಯ, ಜಗನ್ನಾಥ ಮತ್ತು ಬೈರಮ್ಮ ಮೂವರು ಮಕ್ಕಳಿದ್ದು, ಅವರ ಪೈಕಿ ಗೋಪಾಲಯ್ಯ ಮೃತಪಟ್ಟಿದ್ದಾರೆ ಎಂದರೆ ಸರಿ. ಗೋಪಾಲಯ್ಯನಿಗೆ ಹೆಂಡತಿ ಮತ್ತು ಒಬ್ಬ ಮಗಳು ಇರುತ್ತಾರೆ ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ದ್ಯಾವಣ್ಣನ ಮಕ್ಕಳ ಪೈಕಿ ಪ್ರತಿವಾದಿ ಜಗನ್ನಾಥನ ವಿರುದ್ಧ ಮಾತ್ರ ದಾವೆ ಹಾಕಿ ಗೋಪಾಲಯ್ಯನ ವಾರಸುದಾರರು ಮತ್ತು ಬೈರಮ್ಮನನ್ನು ದಾವೆಗೆ ಯಾಕೆ ಸೇರಿಸಿಲ್ಲ ಎಂದರೆ ನಮ್ಮ Grievance (ಕುಂದುಕೊರತೆ) ಕೇವಲ ಜಗನ್ನಾಥನ ವಿರುದ್ಧ ಮಾತ್ರ ಆಗಿರುವುದರಿಂದ ಆತನ ವಿರುದ್ಧ ಮಾತ್ರ ದಾವೆ ಹಾಕಿದ್ದೇವೆ.

5) ನಿಪಿ-2 ರ ಮೂಲ ಕ್ರಯಪತ್ರ ಯಾರ ಬಳಿ ಇದೆ ಎಂದರೆ ದ್ಯಾವಣ್ಣನ ಬಳಿ ಇರುತ್ತದೆ. ನಿಪಿ-2 ರ ಕ್ರಯಪತ್ರ ಸರ್ವೆ ನಂ.71 ಮತ್ತು ಸರ್ವೆ ನಂ.68 ರ ಎರಡೂ ಆಸ್ತಿಗಳನ್ನು ಒಳಗೊಂಡಿರುತ್ತದೆ. ನಿಪಿ-2 ನ್ನು ಕೊಟ್ಟು ಇದರಲ್ಲಿ ಸರ್ವೆ ನಂ.71

ಮತ್ತು ಸರ್ವೆ ನಂ.68 ರ ಬಗ್ಗೆ ಎಲ್ಲಿ ನಮೂದಾಗಿದೆ ತೋರಿಸಿ ಎಂದರೆ ಸಾಕ್ಷಿಯವರು ನನಗೆ ಸ್ವಲ್ಪ ಕಣ್ಣಿನ ತೊಂದರೆ ಇದೆ ಎಂದು ಹೇಳಿದ್ದಾರೆ. ನಿಪಿ-2 ರಲ್ಲಿ ಸದರಿ ಸರ್ವೆ ನಂ.71 ಮತ್ತು ಸರ್ವೆ ನಂ.68 ರ ನಮೂದು ಆಗಿಲ್ಲವೆಂದರೆ ಸರಿಯಲ್ಲ. ನಾನು ಜಕ್ಕೂರಿನಲ್ಲಿ ವಾಸ ಮಾಡುತ್ತೇನೆ ಎಂದರೆ ಸರಿ. ದ್ಯಾವಣ್ಣ ಮೃತಪಟ್ಟ ನಂತರ ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಯ ಜೊತೆಯಲ್ಲಿ ನಾವು ಕೂಡ ಜಂಟಿ ಸ್ವಾಧೀನ ಹೊಂದಿರುವ ಬಗ್ಗೆ ನಾನು ಯಾವ ದಾಖಲೆ ಹಾಜರು ಮಾಡಿದ್ದೇನೆ ಎಂದರೆ ಪಹಣಿ, ಮ್ಯೂಟೇಶನ ಎಲ್ಲವನ್ನು ಹಾಜರು ಮಾಡಿದ್ದೇನೆ. ನಾವು ಯಾವುದೇ ಜಂಟಿ ಸ್ವಾಧೀನ ಹೊಂದಿರದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-35 ರ ಆದೇಶದಲ್ಲಿ ಸರ್ವೆ ನಂ.71 ರ ಬಗ್ಗೆ ಮಾತ್ರ ನಮೂದಾಗಿದ್ದು, ಸರ್ವೆ ನಂ.68 ರ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**